ಮುಖ್ಯ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಯಾದಗಿರಿ .

ಸಿ.ಸಿ. ನಂ. **1155 / 2022**

ಸಿಡಬ್ಲ್ಯೂ.ಃ **1**
ಪಿಡಬ್ಲ್ಯೂ.ಃ**1**

<u>ದಿನಾಂಕಃ **02-08-2025**</u>

<u>ಸಾಕ್ಷಿಗೆ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು</u>
ಮದ್ಯಂತರ ಅರ್ಜಿಯಲ್ಲಿ ಆದ ಆದೇಶದ ಮೇರಿಗೆ

<u>ಪಾಟೀ ಸವಾಲು ಆರೋಪಿತರ ಪರ ವಕೀಲರಾದ ಃ ಶ್ರೀ. ಎಸ್.ಎಸ್ ರವರಿಂದಃ</u>

ನಾನು ಶಾಲೆಯನ್ನು ಕಲಿತಿರುವುದಿಲ್ಲ. ಕೇವಲ ನಾನು ಕನ್ನಡದಲ್ಲಿ ಸಹಿ ಮಾಡುತೇನೆ. ಚಾಸಾ-4 ರವರು ನನ್ನ ಗಂಡನಾಗಬೇಕು ಎಂದರೆ ಸರಿ. ಚಾಸಾ-5 ರವರು ನನ್ನ ತಮ್ಮನಾಗಬೇಕು ಎಂದರೆ ಸರಿ. ನಾನು, ಚಾಸಾ-4 ಮತ್ತು 5 ರವರು ಕೂಡಿ ಕಟ್ಟಿಗೆ ಶಹಾಪೂರ ಗ್ರಾಮದಲ್ಲಿ ವಾಸವಾಗಿರುತ್ತೇವೆ ಎಂದರೆ ಸರಿ. ಚಾಸಾ-5 ರವರು ಖಾಸಗಿ ಶಾಲೆಯಲ್ಲಿ ಶಿಕ್ಷಕನಾಗಿರುತ್ತಾನೆಂದರೆ ಸರಿ. ಯಾವ ದಿನಾಂಕ, ತಿಂಗಳು, ಇಸವಿಯಂದು ಜಿಲ್ಲಾಧಿಕಾರಿಗಳ ಆದೇಶದ ಮೇರೆಗೆ ಪುರಸಭೆಯವರು ಮನೆಯನ್ನು ಖಾಲಿ ಮಾಡಿಸಿ ಕಬ್ಜೆಯನ್ನು ನಮಗೆ ಕೊಟ್ಟಿದ್ದರು ಎಂದು ನನಗೆ ಹೇಳಲು ಬರುವುದಿಲ್ಲ. ಪುರಸಭೆಯವರು ಜಿಲ್ಲಾಧಿಕಾರಿ ಯವರಿಗೆ ಅರ್ಜಿಯನ್ನು ಕೊಟ್ಟಿದ್ದರು. ಯಾವ ದಿನಾಂಕ, ತಿಂಗಳು, ಇಸವಿಯಂದು ಅವರು ಅರ್ಜಿಯನ್ನು ಕೊಟ್ಟಿದ್ದರು ಎಂದರೆ ಸಾಕ್ಷಿಯು ಸುಮ್ಮನಿರುತ್ತಾರೆ. ಪುರಸಭೆಗೆ ಯಾರು ಅರ್ಜಿಯನ್ನು ಕೊಟ್ಟರು

ಎಂದರೆ ಸಾಕ್ಷಿಯು ಅವರ ಮೇಲಾಧಿಕಾರಿಗಳಿಂದ ಅರ್ಜಿ ಬಂದಿತ್ತು ಎಂದು ಹೇಳುತ್ತಾರೆ. ಯಾವ ಕಾರಣಕ್ಕಾಗಿ ಮನೆಯನ್ನು ಖಾಲಿ ಮಾಡಿಸಿರಿ ಎಂದು ಹೇಳಿದ್ದರು ಎಂದರೆ ಸಾಕ್ಷಿಯು ಅವರು ನಕಲಿ ದಾಖಲೆಗಳನ್ನು ಸೃಷ್ಟಿಪಡಿಸಿದ್ದರು ಎಂದು ಹೇಳುತ್ತಾರೆ. ಆರೋಪಿತರು ನಕಲಿ ದಾಖಲೆಗಳನ್ನು ಸೃಷ್ಟಿಪಡಿಸಿರುವುದಿಲ್ಲ ಎಂದರೆ ಸಾಕ್ಷಿಯು ಸುಮ್ಮನಿರುತ್ತಾರೆ. ಜಿಲ್ಲಾಧಿಕಾರಿಗಳು ಲಿಖಿತ ರೂಪದಲ್ಲಿ ಆದೇಶ ಹೊರಡಿಸಿ ಪುರಸಭೆಗೆ ಅದನ್ನು ನೀಡಿದ್ದರು. ಯಾವ ದಿನಾಂಕದಂದು ಆದೇಶ ಮಾಡಿದ್ದರು ಎಂದು ನನಗೆ ಗೊತ್ತಿರುವುದಿಲ್ಲ. ಜಿಲ್ಲಾಧಿಕಾರಿಗಳ ಆದೇಶ ಆದ 15-1 ತಿಂಗಳ ನಂತರ ಪುರಸಭೆಯವರು ಬಂದಿದ್ದರು.

ಪುರಸಭೆಯ ನಾಲ್ಕು-ಐದು ಜನ ಬಂದಿದ್ದರು. ಅದೇ ರೀತಿ ಪೋಲಿಸರು ಸಹ ಬಂದಿದ್ದರು.

ಪಂಚನಾಮೆ ಮಾಡಲು ಆರಕ್ಷಕ ಉಪ ನಿರೀಕ್ಷಕರು ಬಂದಿದ್ದರು. ಮನೆ ಖಾಲಿ ಮಾಡಿ ಕಬ್ಜೆಯನ್ನು ನನಗೆ ನೀಡುವಾಗ ಅಲ್ಲಿ ಪಂಚನಾಮೆಯನ್ನು ಮಾಡಿದ್ದರು ಆವಾಗ ಸಾಬಣ್ಣ ಮತ್ತು ಸಲೀಂ ರವರು ಸದರಿ ಪಂಚನಾಮೆಗೆ ಸಹಿ ಮಾಡಿರುತ್ತಾರೆ. ಆವತ್ತು ಸಾಬಣ್ಣ ಮತ್ತು ಸಲೀಂ ರವರು ಮಾತ್ರ ಇದ್ದರು. ಮನೆಯನ್ನು ಖಾಲಿ ಮಾಡಿ ನಮಗೆ ಅದರ ಕಬ್ಜೆಯನ್ನು ನೀಡಿದ ನಂತರ ನಾವೆಲ್ಲರು ಕಟ್ಟಿಗೆ ಶಹಾಪೂರ ಗ್ರಾಮದಲ್ಲಿ ವಾಸವಾಗಿರುತ್ತೇವೆ ಎಂದರೆ ಸರಿ. ನಮಗೆ ಕಬ್ಜೆಯನ್ನು ನೀಡಿ 2-3 ತಿಂಗಳು ಆದ ನಂತರ ಆರೋಪಿತರು ನಮ್ಮ ಮನೆಯ ಬೀಗವನ್ನು ಮುರಿದು ಅದರ ಕಬ್ಜೆಯನ್ನು ಪಡೆದುಕೊಂಡಿದ್ದರು ಎಂದು ಹೇಳುತ್ತಾರೆ. ಸದರಿ ವಿಷಯ ನನಗೆ ಗೊತ್ತಾದ ನಂತರ ನಾನು ಹಾಗೂ ಚಾಸಾ-4 ರವರು ಪರಿಶೀಲನೆ ಮಾಡಲು ಹೋಗಿದ್ದೆವು ಆವಾಗ ಆರೋಪಿತರು ಅಲ್ಲಿ ಇದ್ದರು. ಸದರಿ ಮನೆಯಲ್ಲಿ ಬಾಡಿಗೆದಾರ ಇರುತಾರೆ ಎಂದು ಹೇಳಿರುತ್ತೀರಿ ಹಾಗಾದರೆ ಸದರಿ ಬಾಡಿಗೆದಾರನ ಹೆಸರು ಏನು ಇರುತ್ತದೆ ಎಂದರೆ ಸಾಕ್ಷಿಯು ನಮಗೆ ಮನೆಯ ಒಳಗಡೆ ಪ್ರವೇಶ ಮಾಡಲು ಬಿಡಲಿಲ್ಲ ಎಂದು ಹೇಳುತ್ತಾರೆ.ಆವಾಗ ನಮ್ಮ ಹಾಗೂ ಆರೋಪಿತರ ನಡುವೆ ತಂಟೆ ಆಗಿತ್ತು. ಆರೋಪಿತರು ನಮಗೆ ನಾವು ಮನೆಯ ತಂಟೆಗೆ ಬಂದರೆ ನಮ್ಮನ್ನು ಅವರು ಖಲಾಸ್ ಮಾಡಿ ಸಮಾದಿ ಮಾಡುತ್ತೇವೆ ಅಂತಾ ಜೀವದ ಬೆದರಿಕೆ ಹಾಕಿರುತ್ತಾರೆ. ಈ ವಿಷಯವನ್ನು ನನ್ನ ದೂರಿನಲ್ಲಿ ಬರೆಸಿರುತ್ತೇನೆ.ಈ ವಿಷಯವನ್ನು ದೂರಿನಲ್ಲಿ ಬರೆಸದಿದ್ದರು ಸಹ ಬರೆಸಿರುತ್ತೇನೆಂದು ಸುಳ್ಳು ಸಾಕ್ಷ್ಯ ಹೇಳುತ್ತಿದೇನೆಂದರೆ ಸರಿಯಲ್ಲ. 3 ನೇ ಆರೋಪಿತನ ಊರು ಗುರುಮಠಕಲ್ ತಾಲ್ಲೂಕಿನ ಧರ್ಮಾಪೂರ ಗ್ರಾಮ ಇರುತ್ತದೆ ಎಂದರೆ ಸರಿ. ಸದರಿ ಗ್ರಾಮದಲ್ಲಿ 3 ನೇ ಆರೋಪಿತನು ಜಮೀನನ್ನು ಮತ್ತು ಮನೆಯನ್ನು ಹೊಂದಿರುತ್ತಾನೆ ಹಾಗೂ ಆತನು ಕುಟುಂಬ ಸಮೇತ ವಾಸವಾಗಿರುತ್ತಾನೆ. 3 ನೇ ಆರೋಪಿತನು ಯಾದಗಿರಿ ಪಟ್ಟಣಕ್ಕೆ ಯಾವತ್ತು ಬರುವುದಿಲ್ಲ ಎಂದರೆ ಸರಿಯಲ್ಲ. ನಾನು ದುರುದ್ದೇಶದಿಂದ ಆತನ ಯಾದಗಿರಿಗೆ ಬರುತ್ತಾನೆಂದು ಸುಳ್ಳು ಸಾಕ್ಷ್ಯ ಹೇಳುತ್ತಿದೇನೆಂದರೆ ಸರಿಯಲ್ಲ. ತಂಟೆಯು ಮನೆಯ ಅಂಗಳದಲ್ಲಿ ಆಗಿತ್ತು. ಸದರಿ ಮನೆಯ ಅಕ್ಕ ಪಕ್ಕ ಮನೆಗಳು ಮತ್ತು ಅಂಗಡಿಗಳು ಇರುತ್ತವೆ. ಸದರಿ ಮನೆಯು ಹೈದ್ರಾಬಾದ್ ರಾಷ್ಟ್ರೀಯ ಹೆದ್ದಾರಿ ರಸ್ತೆಯ ಪಕ್ಕ ಇರುತ್ತದೆ. ಕಳೆದ ನಾಲ್ಕು ವರುಷಗಳ ಹಿಂದೆ 15 ಆಗಸ್ಟ್ ರಂದು ಗುನ್ನಾ ಸ್ಥಳಕ್ಕೆ ಹೋಗಿದ್ದೆವು. ತಂಟೆ ನಡೆದಾಗ 15-20 ಜನರು ಸೇರಿದ್ದರು. ಅವರು ತಂಟೆಯನ್ನು ಬಿಡಿಸಲು ಬಂದಿರಲಿಲ್ಲ. ಸದರಿ ಜನರ ಹೆಸರು ಮತ್ತು ಅವರು ಯಾವ ಊರಿನವರು ಇದ್ದರು ಎಂದು ನನಗೆ ಗೊತ್ತಿರುವುದಿಲ್ಲ. ತಂಟೆಯು ಒಂದು ಗಂಟೆಯವರೆಗೆ ನಡೆದಿತ್ತು. ತಂಟೆಯು 11.00 ಗಂಟೆಯಿಂದ ಪ್ರಾರಂಭವಾಗಿ 12.00 ಗಂಟೆಗೆ ಮುಗಿಯಿತು. ನಾವು ಒದರಾಡುತ್ತಿದ್ದಾಗ ಚಾಸಾ-5 ರವರು ಬಂದಿದ್ದರು. ನಾವು ಚಾಸಾ-5 ರವಗಿಗೆ ಫೋನ್ ಕರೆ ಮಾಡಿ ಕರೆದುಕೊಂಡಿರಲಿಲ್ಲ ಆತನೇ ಗುನ್ನಾ ಸ್ಥಳಕ್ಕೆ ಬಂದಿದ್ದನು. ಚಾಸಾ-5 ರವರು ಬಂದಾಗ ಎಷ್ಟು ಗಂಟೆಗೆ ತಂಟೆ ನಡೆಯಿತು

ಎಂದರೆ ಸಾಕ್ಷಿಯು ನಾವು ಕೂಗಾಡುತ್ತಿರುವಾಗ ಬಂದರು ಎಂದು ಹೇಳುತ್ತಾರೆ. ಚಾಸಾ-5 ರವರು ನಮ್ಮನ್ನು ಬೆದರಿಸಿ ಕರೆದುಕೊಂಡು ಬಂದಿದ್ದನು. ಚಾಸಾ-6 ರವರು ಚಾಸಾ-5 ರವರ ಗೆಳೆಯ ಇರುತ್ತಾನೆ ಎಂದರೆ ಸರಿ. ಅವರಿಬ್ಬರು ಯಾವಾಗಲು ಜೊತೆಯಾಗಿ ಇರುತ್ತಾರೆ ಎಂದರೆ ಸರಿ. ಚಾಸಾ-5 ಮತ್ತು 6 ರವರು ಬಂದು ತಂಟೆಯನ್ನು ಬಿಡಿಸಿರುತ್ತಾರೆಂದು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆಂದರೆ ಸರಿಯಲ್ಲ. ಘಟನೆ ಆದ ಆರು-ಏಳು ತಿಂಗಳ ನಂತರ ಹಿರಿಯರನ್ನು ವಿಚಾರಿಸಿ ದೂರನ್ನು ನೀಡಿದ್ದೆ. ಈ ಪ್ರಕರಣದ ಘಟನೆ ಆಗದೇ ಇದ್ದರು ಸಹಾ ನಾನು ಸುಳ್ಳು ದೂರನ್ನು ಆರೋಪಿತರ ವಿರುದ್ಧ ನೀಡಿರುತ್ತೇನೆಂದರೆ ಸರಿಯಲ್ಲ. ದೂರನ್ನು ಯಾರು ಬರೆದರು ಎಂದರೆ ಸಾಕ್ಷಿಯು ಸುಮ್ಮನಿರುತ್ತಾರೆ. ಸಾಕ್ಷಿಯು ಮುಂದುವರೆದು ನಾನು ಹೋಗಿ ಘಟನೆಯ ಬಗ್ಗೆ ಹೇಳಿದ್ದೆ ಆವಾಗ ಅವರು ಬರೆದು ಕೊಂಡರು ಎಂದು ಹೇಳುತ್ತಾರೆ. ದೂರಿನಲ್ಲಿ ಬರೆದಿರುವ ವಿಷಯಗಳು ನನಗೆ ಗೊತ್ತಿರುವುದಿಲ್ಲ ಎಂದರೆ ಸರಿಯಲ್ಲ. ದೂರನ್ನು ನೀಡಿದ ನಂತರ ಪೋಲಿಸರು ನನ್ನನ್ನು ಎಲ್ಲಿಯು ಸಹ ಕರೆದಿರುವುದಿಲ್ಲ ಎಂದರೆ ಸರಿ. ಘಟನೆ ಆದ 2-3 ತಿಂಗಳ ನಂತರ ನಿಪಿ-2 ನ್ನು ತೆಗೆದಿದ್ದರು ಎಂದು ಹೇಳುತ್ತಾರೆ. ಆರಕ್ಷಕ ಉಪ ನಿರೀಕ್ಷರು ಫೋಟೊವನ್ನು ಒಬ್ಬ ಹುಡುಗನ ಕಡೆಯಿಂದ ತೆಗೆದಿದ್ದರು ಎಂದು ಹೇಳುತ್ತಾರೆ. ಸದರಿ ಹುಡುಗನ ಹೆಸರು ನನಗೆ ಗೊತ್ತಿರುವುದಿಲ್ಲ. ಸದರಿ ಮನೆ 1 ನೇ ಆರೋಪಿತನಿಗೆ ಸಂಬಂಧ ಪಟ್ಟಿರುತ್ತದೆ ಎಂದರೆ ಸಾಕ್ಷಿಯು ಆತನು ನಕಲಿ ದಾಖಲೆಗಳನ್ನು ಸೃಷ್ಟಿಪಡಿಸಿರುತ್ತಾನೆ ಎಂದು ಹೇಳುತ್ತಾರೆ. 2014-15 ನೇ ಸಾಲಿನಲ್ಲಿ 1 ನೇ ಆರೋಪಿತನು 2 ನೇ ಆರೋಪಿತನು ಹೆಸರಿಗೆ ಮನೆಯನ್ನು ದಾನಪತ್ರ ಮಾಡಿರುತ್ತಾನೆಂದರೆ ಸರಿ. ಸದರಿ ಮನೆಯ ಮೇಲೆ ಬ್ಯಾಂಕಿನ ಸಾಲ ಇರುತ್ತದೆ ಎಂದರೆ ಸಾಕ್ಷಿಯು ನಮಗೆ ಗೊತ್ತಿರುವುದಿಲ್ಲ ಎಂದು ಹೇಳುತ್ತಾರೆ. 1 ನೇ ಆರೋಪಿತನು ಮೃತ ಪಟ್ಟಿರುತ್ತಾನೆಂದರೆ ಸರಿ. ಸದರಿ ಮನೆಗೆ 2 ನೇ ಆರೋಪಿತಳು ಮಾಲೀಕಳು ಮತ್ತು ಕಬ್ಜೆದಾರಳಾಗಿರುತ್ತಾಳೆ ಎಂದರೆ ಸಾಕ್ಷಿಯು ದಾಖಲೆಗಳನ್ನು ಸೃಷ್ಟಿಪಡಿಸಿ ಕಬ್ಜೆಯನ್ನು ಪಡೆದುಕೊಂಡಿರುತ್ತಾರೆ ಎಂದು ಹೇಳುತ್ತಾರೆ. ಆರೋಪಿತರು ದಾಹಲೆಗಳನ್ನು ಸೃಷ್ಟಿಪಡಿಸಿರುತ್ತಾರೆ ಎಂದು ಸುಳ್ಳು ಸಾಕ್ಷ್ಯ ಹೇಳುತ್ತಿದೇನೆಂದರೆ ಸರಿಯಲ್ಲ. 2016 ನೇ ಇಸವಿಯಲ್ಲಿ ಸದರಿ ಮನೆಯ ಕುರಿತು ಚಾಸಾ-4 ರವರು 1 ನೇ ಆರೋಪಿತನ ವಿರುದ್ದ ಹಾಗೂ ಇತರರು ವಿರುದ್ದ ದಾವೆಯನ್ನು ಸಲ್ಲಿಸಿದ್ದರು ಎಂದರೆ ಸರಿ. ಸದರಿ ದಾವೆಯ ನೋಟಿಸು 1 ನೇ ಆರೋಪಿತನಿಗೆ ಜಾರಿ ಮಾಡಿಸದೇ ಏಕಪಕ್ಷೀಯಾಗಿ ತೀರ್ಪನ್ನು ಪಡೆದುಕೊಂಡಿದ್ದನು ಎಂದರೆ ಸಾಕ್ಷಿಯು ನ್ಯಾಯಾಲಯದಿಂದ ಆದೇಶ ಆಗಿತ್ತು ಎಂದು ಹೇಳುತ್ತಾರೆ. ಸದರಿ ಆದೇಶವನ್ನು ಪ್ರಶ್ನಿಸಿ 1 ನೇ ಆರೋಪಿತನು ಮೇಲ್ಮನವಿಯನ್ನು ಸಲ್ಲಿಸಿದನು ಹಾಗೂ ಸದರಿ ಮೇಲ್ಮನವಿಯು ಪುರಸ್ಕರಿಸಿ ಸದರಿ ದಾವೆಯನ್ನು ವಿಚಾರಣೆಗೋಸ್ಕರ ಅಧೀನ ನ್ಯಾಯಾಲಯಕ್ಕೆ

ಕಳುಹಿಸಿಕೊಡಲಾಯಿತು ಎಂದರೆ ಸಾಕ್ಷಿಯು ಆದೇಶ ಆಗಿತ್ತು ಎಂದು ಹೇಳುತ್ತಾರೆ. ಸದರಿ ದಾವೆಯು ಇನ್ನೂ ಚಾಲ್ತಿಯಲ್ಲಿದೆ ಎಂದರೆ ಸರಿ.

ಈ ಹಂತದಲ್ಲಿ ವಕೀಲರ ಕೋರಿಕೆಯ ಮೇರಗೆ ಪಾಟೀ ಸವಾಲನ್ನು ಮುಂದೂಡಲಾಯಿತು.

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚುಗಾರನಿಂದ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ ಅದೆ.

ಮುಖ್ಯ ನ್ಯಾಯಿಕ ದಂಡಾಧಿಕಾರಿಗಳು,
ಯಾದಗಿರಿ.

ಮುಖ್ಯ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಯಾದಗಿರಿ .

ಸಿ.ಸಿ. ನಂ. **1489 / 2024**

ಸಿಡಬ್ಲ್ಯೂ.ಃ **3**
ಪಿಡಬ್ಲ್ಯೂ.ಃ**1**

ದಿನಾಂಕಃ **17-07-2025**

ಸಾಕ್ಷಿಗೆ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು

| | | |
|---|---|---|
| ಸಾಕ್ಷಿಯ ಹೆಸರು | - | ಗುರುರಾಜ |
| ತಂದೆಯ/ಗಂಡನ ಹೆಸರು | - | ನಾಗಣ್ಣಾ ಪೂಜಾರಿ |
| ವಯಸ್ಸು | - | **47** ವರ್ಷ |
| ಉದ್ಯೋಗ | - | ಒಕ್ಕಲುತನ |
| ವಾಸಸ್ಥಳಃ | - | ದಂಡಗುಂಡ, ತಾಃ ಚಿತ್ತಾಪೂರ |

ಮುಖ್ಯ ವಿಚಾರಣೆಃ ಸ.ಸ.ಅಭಿಯೋಜಕರಿಂದಃ

ಚಾಸಾ-1 ರವರ ಗಂಡನಗದ ಸಿದ್ದರಾಮ ರೆಡ್ಡಿ ರವರಿಗೆ ಅಪಘಾತ ಆಗಿ ಮೃತ ಪಟ್ಟಿದ್ದರು ಅವರನ್ನು ನೋಡಲು ನಾನು ಆಸ್ಪತ್ರೆಗೆ ಹೋಗಿದ್ದೆ. ದಿನಾಂಕ 10.02.2024 ರಂದು ಸರ್ಕಾರಿ ಆಸ್ಪತ್ರೆ, ಯಾದಗಿರಿಗೆ ನಾನು ಹೋಗಿದ್ದೆ. ಅಲ್ಲಿ ಪೋಲಿಸರು ಮತ್ತು ಮೃತನ ಮನೆಯವರು ಇದ್ದರು. ಪೋಲಿಸರು ನನಗೆ ಸಹಿ ಮಾಡು ಎಂದು ಹೇಳಿದ್ದರು ಆಕಾರಣ ನಾನು ಸಹಿ ಮಾಡಿದ್ದೆ. ಸಾಕ್ಷಿಯು ತಾನು ಸಹಿ ಮಾಡಿದ ದಾಖಲೆಯನ್ನು ನೋಡಿ ಗುರುತಿಸಿದ್ದು ಸದರಿ ದಾಖಲೆಯು ಶವ ತನಿಖಾ ವರದಿ ಆಗಿರುತ್ತದೆ ಅದನ್ನು ನಿಪಿ-1 ಎಂದು ಗುರುತಿಸಲಾಯಿತು. ಸಾಕ್ಷಿಯು ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-1 ಎ ಎಂದು ಗುರುತಿಸಲಾಯಿತು. ಸಾಕ್ಷಿಯು ಸದರಿ ಫೋಟೊದಲ್ಲಿ ತಾನು ಇರುವುದನ್ನು ನೋಡಿ ಗುರುತಿಸಿರುತ್ತಾರೆ ಆದ್ದರಿಂದ ಸದರಿ ಫೋಟೊ ವನ್ನು ನಿಪಿ-2 ಎಂದು ಗುರುತಿಸಲಾಯಿತು.

ಪಾಟೀ ಸವಾಲುಃ ಆರೋಪಿ ಪರ ವಕೀಲರಾದ ಃ ಶ್ರೀ ಎಸ್.ಎಸ್.ಪಿ. ರವರಿಂದಃ

ಮೃತ ಸಿದ್ರಾಮ ರೆಡ್ಡಿ ಪರಿಚಯ ಇತ್ತು ಎಂದು ನಾನು ಸುಳ್ಳು ಸಾಕ್ಷ್ಯ ಹೇಳಿರುತ್ತೇನೆಂದರೆ ಸರಿಯಲ್ಲ. ಯಾವ ವಿಷಯದ ಕುರಿತು ಪೋಲಿಸರು ನನ್ನ ಸಹಿಯನ್ನು ಪಡೆದುಕೊಂಡಿದ್ದರು ಎಂದು ನನಗೆ ಗೊತ್ತಿರುವುದಿಲ್ಲ ಪೋಲಿಸರು ಸಹಿ ಮಾಡಿ ಎಂದು ಹೇಳಿದ ಕಾರಣ ನಾನು ಸಹಿ ಮಾಡಿದ್ದೆ.

<u>ಮರು ವಿಚಾರಣೆಃ ಇಲ್ಲ</u>

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚುಗಾರನಿಂದ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ ಅದೆ.

ಮುಖ್ಯ ನ್ಯಾಯಿಕ ದಂಡಾಧಿಕಾರಿಗಳು,
ಯಾದಗಿರಿ.

## Accused

**Accused absetn. EP filed.**

ಮುಖ್ಯ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಯಾದಗಿರಿ .

**ಸಿ.ಸಿ. ನಂ. 60/ 2019**

ಸಿಡಬ್ಲ್ಯೂ.**3**
ಪಿಡಬ್ಲ್ಯೂ.**3**

ದಿನಾಂಕಃ **02-09-2023**

ಸಾಕ್ಷಿಗೆ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು

ಸಾಕ್ಷಿಯ ಹೆಸರು - ಭೀಮಪ್ಪ

ತಂದೆಯ/ಗಂಡನ ಹೆಸರು - ಬಸವರಾಜ

ವಯಸ್ಸು - **28** ವರ್ಷ

ಉದ್ಯೋಗ - ಕೂಲಿ ಕೆಲಸ

ವಾಸಸ್ಥಳಃ - ಯಾದಗಿರಿ

ಮುಖ್ಯ ವಿಚಾರಣೆಃ ಹಿ.ಸ.ಸ.ಅಭಿಯೋಜಕರಿಂದಃ

ಚಾಸಃ2 ರವರ ಪರಿಚಯ ಇದೆ. ಪೋಲಿಸರಿಗೆ ನನಗೆ ಪಂಚನಾಮೆಗೆ ಕರೆದಿರುವುದಿಲ್ಲ ಅದರ ವಿಷಯ ಗೊತ್ತಿಲ್ಲ. ಸದರಿ ಪಂಚನಾಮೆಯನ್ನು ನಿಪಿ-2 ಈಗಾಗಲೇ ಗುರತಿಸಲಾಗಿದೆ ಸಾಕ್ಷಿಯ ಸಹಿಯನ್ನು ನಿಪಿ-2(ಸಿ) ಎಂದು ಗುರುತಿಸಲಾಯಿತು .

( ಈ ಹಂತದಲ್ಲಿ ಹಿರಿಯ ಸ.ಸ. ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟಿ ಸವಾಲು ಮಾಡಲು ಕೇಳಿದ್ದು ಅವಕಾಶ ನೀಡಲಾಗಿದೆ.)

ಪಾಟೀ ಸವಾಲುಃ ಪರಃ ಶ್ರೀ ಹಿರಿಯ ಸ.ಸ. ವಕೀಲರಿಂದಃ

ದಿಃ 29-01-2019 ರಂದು ಬೆಳಗ್ಗೆ 10 ರಿಂದ 11 ಗಂಟೆಯವರೆಗೆ ಯಾದಗಿರಿ ನಗರ ಪೋಲಿಸರು ನನ್ನ ಮತ್ತು ಚಾಸಾಃ2 ರವರ ಸಮಕ್ಷಮ ಚಾಸಾಃ1 ರವರು ಘಟನೆ ನಡೆದ ಸ್ಥಳವನ್ನು ತೋರಿಸಿದಂತೆ ಯಾವುದೇ ಪಂಚನಾಮೆ ಮಾಡಿರುವುದಿಲ್ಲ ನಾನು ಮತ್ತು ಚಾಸಾಃ2 ರವರು ಘಟನಾ ಸ್ಥಳದ ಪಂಚನಾಮೆಯ ಸಂಗತಿಗಳನ್ನು ಓದಿ ತಿಳಿದು ಸ್ಥಳದಲ್ಲಿ ಸಹಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಈಗ ಭಾವ ಚಿತ್ರದಲ್ಲಿ ತೋರಿಸಿರುವ ನನ್ನ ಭಾವ ಚಿತ್ರ ಇದೆ ಎಂದರೆ ನಿಜ. . ಸದರಿ ಭಾವ ಚಿತ್ರವನ್ನು ಯಾವ ವಿಷಯಕ್ಕೆ ತೆಗೆದಿರುತ್ತಾರೆ ಎಂದರೆ ಸರಿಯಲ್ಲ. ಭಾವಚಿತ್ರವನ್ನು ನಿಪಿ-3 ಎಂದು ಈಗಾಗಲೇ ಗುರುತಿಸಲಾಗಿರುತ್ತದೆ . ಪೋಲಿಸರು ನಮ್ಮ ಸಮಕ್ಷಮ ಪಂಚನಾಮೆ ಮಾಡಿದ್ದರೂ ಸಹ ಆರೋಪಿತರಿಗೆ ಸಹಾಯ ಮಾಡಲು ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ ಇಲ್ಲ</u>

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚುಗಾರನಿಂದ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ ಅದೆ.

ಮುಖ್ಯ ನ್ಯಾಯಿಕ ದಂಡಾಧಿಕಾರಿಗಳು,
ಯಾದಗಿರಿ.

ಮುಖ್ಯ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಯಾದಗಿರಿ .

**ಸಿ.ಸಿ. ನಂ. 60/ 2019**

ಸಿಡಬ್ಲ್ಯೂ.**4**
ಪಿಡಬ್ಲ್ಯೂ.**4**

ದಿನಾಂಕಃ **02-09-2023**

ಸಾಕ್ಷಿಗೆ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು

ಸಾಕ್ಷಿಯ ಹೆಸರು - ಬಸಪ್ಪ

ತಂದೆಯ/ಗಂಡನ ಹೆಸರು - ರಾಮಪ್ಪ

ವಯಸ್ಸು - **56** ವರ್ಷ

ಉದ್ಯೋಗ - ಪ್ರೋಪೇಸರ

ವಾಸಸ್ಥಳಃ - ಯಾದಗಿರಿ

ಮುಖ್ಯ ವಿಚಾರಣೆಃ ಹಿ.ಸ.ಸ.ಅಭಿಯೋಜಕರಿಂದಃ

ದಿಃ 12-02-2019 ರಂದು ಪೋಲಿಸರು ನಮ್ಮ ಕಾಲೇಜಿಗೆ ಆರೋಪಿತರನ್ನು ಕರೆದುಕೊಂಡು ಬಂದಿರುತ್ತಾರೆ. ನಮ್ಮ shepty locker ಕಳ್ಳತನವಾಗಿದ್ದು , ಪೊಲೀಸರು ಆರೋಪಿತರು ಮತ್ತು ನನ್ನನ್ನು ರೈಲ್ವೆ ಟ್ರ್ಯಾಕಿನ ಹತ್ತಿರ ಕರೆದುಕೊಂಡು ಹೋಗಿ, ಸದರಿ ಜಾಗದಲ್ಲಿ ಒಂದು ಲಾಕರ ಬಿದ್ದಿದ್ದು , ಸದರಿ ಲಾಕರ ರೈಲ್ವೆ ಟ್ರ್ಯಾಕಿನ ಸ್ವಲ್ಪ ದೂರದಲ್ಲಿ ಬಿದ್ದಿತ್ತು. ಆರೋಪಿತರು ಸದರಿ ನಮ್ಮ ಕಾಲೇಜಿಗೆ ಸೇರಿದ ಲಾಕರನ್ನು ತೋರಿಸಿರುತ್ತಾರೆ. ಜಗದಲ್ಲಿ ಪಂಚನಮೆ ಮಾಡಿ ಲಾಕರನ್ನು ತೆಗೆದುಕೂಂಡು ಠಾಣೆಗೆ ತೆಗೆದುಕೊಂಡು ಹೋಗಿರುತ್ತಾರೆ. ಸಾಕ್ಷಿಯು ಪಂಚನಾಮೆಯನ್ನು ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು , ಪಂಚನಾಮೆ ನಿಪಿ-6 ಎಂದು , ಸಹಿ ನಿಪಿ-6 (ಎ) ಎಂದು ಗುರುತಿಸಲಯಿತು.

ಮುಂದುವರೆದ ಮುಖ್ಯ ವಿಚಾರಣೆಗಾಗಿ ಮುಂದೂಡಲಾಯಿತು.

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚುಗಾರನಿಂದ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ ಅದೆ.

ಮುಖ್ಯ ನ್ಯಾಯಿಕ ದಂಡಾಧಿಕಾರಿಗಳು,
ಯಾದಗಿರಿ

ಮುಖ್ಯ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಯಾದಗಿರಿ .

ಸಿ.ಸಿ. ನಂ. **212/ 2021**

ಸಿಡಬ್ಲ್ಯೂ.1
ಪಿಡಬ್ಲ್ಯೂ.1

ದಿನಾಂಕಃ **31-08-2023**

ಸಾಕ್ಷಿಗೆ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು

ಸಾಕ್ಷಿಯ ಹೆಸರು - ಶಿವಾಜಿ

ತಂದೆಯ/ಗಂಡನ ಹೆಸರು - ಖಂಡಪ್ಪ

ವಯಸ್ಸು - **32** ವರ್ಷ

ಉದ್ಯೋಗ - ಇಸ್ತ್ರಿ ಕೆಲಸ

ವಾಸಸ್ಥಳಃ - ಯಾದಗಿರಿ

ಮುಖ್ಯ ವಿಚಾರಣೆಃ ಹಿ.ಸ.ಸ.ಅಭಿಯೋಜಕರಿಂದಃ

ಮೃತ ಖಂಡಪ್ಪ ನನ್ನ ಗಂಡ. ಚಾಸಾಃ 6 ನನ್ನ ಅತ್ತೆ. ಚಾಸಃ7 ರಿಂದ 9 ರವರು ನನ್ನ ಸಂಬಂಧಿಕರು. ಆರೋಪಿಯು ಪರಿಚಯ ಇರುವುದಿಲ್ಲ. ನನ್ನ ಗಂಡ ತೀರಿಕೊಂಡು ಈ ಎರಡು ವರ್ಷವಾಗಿದೆ. ನನ್ನ ಗಂಡ ಅಪಘತದಲ್ಲಿ ತೀರಿಕೊಂಡಿರುತ್ತಾನೆ. ಸುಮಾರು ಎರಡು ವರ್ಷದ ಹಿಂದೆ ನಾನು ನನ್ನ ಗಂಡ ಅಂಗಡಿಯಿಂದ ನಡೆದುಕೊಂಡು ಮನೆಗೆ ಹೋಗುತ್ತಾ ಇರುವಾಗ ಮಃ1-30 ಗಂಟೆಗೆ ಹೊಸಳ್ಳಿ ಕ್ರಾಸ ನೀರಿನ ಟ್ಯಾಂಕಿನ ಹತ್ತಿರ ಒಬ್ಬ ಬೈಕನವನು ಅತೀ ವೇಗ ಮತ್ತು ಅವಜಗರೂಕತೆಯಿಂದ ನಡೆಸಿಕೊಂಡು ಬಂದು ನನ್ನ ಗಂಡನಿಗೆ ಡಿಕಿಪಡಿಸಿದ ನನ್ನ ಗಂಡನಿಗೆ ತಲೆಗೆ ಪೆಟ್ಟಾಗಿ ಪ್ರಜ್ಞೆ ತಪ್ಪಿ ತು. ನಂತರ ಸರಕಾರಿ ಆಸಪತ್ರೆಗೆ ಕರೆದುಕೊಂಡು ಹೋದೆವು. ನಂತರ ತಕ್ಷಣವೇ ಗುಲಬರ್ಗಾಕ್ಕೆ ಯೂನೈಟೆಡ್ ಆಸ್ಪ್ರೆಯಲಲ್ಲಿ ಸುಮರು ಮುರು ತಿಂಗಳು ಚಿಳಿಕಿತ್ಸೆ ಪಡೆದುಕೂಂಡಿರುತ್ತೇವೆ ನಂತರ ಹೆಚ್ಚಿ ನ ಚಿಕಿತ್ಸೆಗಾಗಿ ವಿಜಯಬೂರಕ್ಕೆ ಕರೆದುಕೊಂಡು ಹೇಗಿರುತ್ತೇವೆ. ನಂತರ ವಿಜಯಒಪೂರದಿಂದ ಹೈದ್ರಾಬದಲಕ್ಕೆ ಹೋರಗುವಾಗ ರತ್ತೆಯ ಮದ್ಯೆ ತೀರಿಕೊಂಡಿರುತನೆ. ನಾನು ದೂರು ಕೊಟ್ಟಿದ್ದು ದುರಿನಲ್ಲಿ ಬರೆದಿರುವ ವಿಷಯ ಗೊತಿಲ್ಲ ನಿಪಿ-1 ತೋರಿಸಲಗಿದಿ ಸರಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು.

( ಈ ಹಂತದಲ್ಲಿ ಹಿರಿಯ ಸ.ಸ. ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟಿ ಸವಾಲು ಮಾಡಲು ಕೇಳಿದ್ದು ಅವಕಾಶ ನೀಡಲಾಗಿದೆ.)

ಪಾಟೀ ಸವಾಲುಃ ಪರಃ ಶ್ರೀ ಹಿರಿಯ ಸ.ಸ. ವಕೀಲರಿಂದಃ

ದಿಃ 21-04-20 ರಂದು ಕೆಲಸ ಮುಗಿಸಿಕೊಂಡು ಮಃ1-30 ಕ್ಕೆ ನಾನು ನನ್ನ ಗಂಡ ಸಹರ ಕಾಲೋದಿನಿಗೆ ಹೋಗಲು ಶುಭಂ ಪೆಟ್ರೋಲ ಬಂಕ ಹತ್ತಿರ ಮುಖ್ಯ ರಸ್ತೆಯಲ್ಲಿ ನಡೆದುಕೊಂಡು ಹೋಗುವಾಗ ಗಂಜ್ ಕಡೆಯಿಂದ ಒಬ್ಬ ಮೋಟರ ಸೈಕಲ ಸವಾರ ತನ್ನ ಮೇಟಾರ ಸೈಕಲ ಅತೀ ವೇಗ ಮತ್ತು ಅಲಕ್ಷತನದಿಂದ ನಡೆಸಿಕೊಂಡು ಬಂದು ನನ್ನ ಗಂಡನಿಗೆ ಡಿಕ್ಕಿಪಡಿಸಿದ್ದರಿಂದ ನನ್ನ ಗಂಡನ ತಲೆಗೆ ಪೆಟ್ಟಾಗಿ ಮೃತಪಟ್ಟಿರುತ್ತೇನೆ ಎಂದರೆ ಸರಿಯಲ್ಲ. ಅದರಂತೆ ನಾನು ದೂರು ಕೊಟ್ಟಿದ್ದೇನೆ ಎಂದರೆ ಸರಿಯಲ್ಲ.

ದಿಃ 25-08-2020 ರಂದು ನನು ಪೋಲಿಸರಿ ಮುಂದೆ ಪುನಃ ಹೇಳಿಕೆ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ಪುನರ ಹೇಳಿಕೆಯನ್ನು ನಿಪಿ-2 ಎಂದು ಗುರುತಿಸಲಾಯಿತು. ಪೋಲಿಸರು ನನಗೆ ಆರೋಪಿಯನ್ನು ತೋರಿಸಿದ್ದರು ಅದರಂತೆ ನಾನು ನಿಪಿ-2 ರಂತೆ ಪುನಃ ಹೇಳಿಕೆ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ಆರೋಪಿಯೊಂದಿಗೆ ಹೊಂದಾಣಿಕೆ ಮಾಡಿಕೊಂಡು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪೋಲಿಸರು ನನ್ನ ಸಮಕ್ಷಮ ಶವ ಪಂಚನಮೆ ಮಾಡಾುವ ಕಾಲಕ್ಕೆ ಒಂದು ಪೊಟೋ ತೆಗೆದಿರುತ್ತರೆ ಎಂದರೆ ಸರಿ . ಪೋಟೋವನ್ನು ನಿಪಿ-3 ಎಂದು ಗುರುತಿಸಲಾಯಿತು. ನಿಪಿ-1 ರಂತೆ ನಾನು ಹೇಳಿಕೆ ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲುಃ ಪರಃ</u>

<u>ಮರು ವಿಚಾರಣೆಃ ಇಲ್ಲ</u>

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚುಗಾರನಿಂದ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ ಅದೆ.

ಮುಖ್ಯ ನ್ಯಾಯಿಕ ದಂಡಾಧಿಕಾರಿಗಳು,
ಯಾದಗಿರಿ.

ಮುಖ್ಯ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಯಾದಗಿರಿ .

ಸಿ.ಸಿ. ನಂ. **264/ 2021**

ಸಿಡಬ್ಲ್ಯೂ.**6**
ಪಿಡಬ್ಲ್ಯೂ.**2**

ದಿನಾಂಕಃ **31-08-2023**

ಸಾಕ್ಷಿಗೆ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು

ಸಾಕ್ಷಿಯ ಹೆಸರು - ಅಶೋಕ

ತಂದೆಯ/ಗಂಡನ ಹೆಸರು - ಸಾಬಣ್ಣ

ವಯಸ್ಸು - **27** ವರ್ಷ

ಉದ್ಯೋಗ - ಟೈಲರ ಕೆಲಸ

ವಾಸಸ್ಥಳಃ - ಯಾದಗಿರಿ

ಮುಖ್ಯ ವಿಚಾರಣೆಃ ಹಿ.ಸ.ಸ.ಅಭಿಯೋಜಕರಿಂದಃ

ಚಾಸಾಃ1 ನನ್ನ ಅಣ್ಣ ಹೆಡಂತಿ. ಮೃತ ನನ್ನ ಅಣ್ಣ. ಚಾಸಾಃ7 ನನ್ನ ದೊಡ್ಡಣ್ಣ. ಚಾಸಾ8 ರವರ ಪರಿಚಯ ಇದೆ. ಚಾಸಃ9 ಮತ್ತು 10 ರವರ ಪರಿಚಯ ಇದೆ . ಅವರರು ಅಪಘಾತ ಸ್ಥಳದಲ್ಲಿ ಅಕ್ಕಪಕ್ಕದ ಅಂಗಡಿಯವರು. ನನ್ನ ಅಣ್ಣ ಮೃತಪಟ್ಟು ಸುಮಾರು 3 ವರ್ಷವಾಯಿತು. ದಿಃ 06-04-2021 ರಂದು ನಾನು ಮತ್ತು ನನ್ನ ಅಣ್ಣ ವರೊಂದಿಗೆ ನಡೆದುಕೊಂಡು ಮೊಬೈಲ ರಿಚಾರ್ಜ ಮಾಡಲು ರಾಃ 7-30 ಗಂಟೆಗೆ ಸುಮಾರಿಗೆ ಹೋಗಿದ್ದರು. ರಿಚಾರ್ಜ ಮಾಡಿಕೊಂಡು ವಾಪಸ್ಸು ಮನೆಗೆ ಹೋಗಬೇಕರೆ ಸುಭಾಸ ಸರ್ಕಲ ಹತ್ತಿರ ವಾಡಿ ಕಡೆಯಿಂದ ಲಾರಿ ವೇಗವಾಗಿ ಬಂದು ನನ್ನ ಅಣ್ಣನಿಗೆ ಡಿಕ್ಕಿಪಡಿಸಿಕೊಂಡು ಹೋಗಿರುತ್ತದ್ದೆ. ಆರೋಪಿಯನ್ನು ನೋಡಿದರೆ ನಾನು ಗುರುತಿಸುತ್ತೇನೆ. ಆಸ್ಪತ್ರೆಗೆ ಹೋದೆ . ನನ್ನ ಅಣ್ಣ ನಿಗೆ ಕಾಲು ಮತ್ತು ಸೊಂಟಕ್ಕೆ ಗಾಯಮಾಗಿತ್ತು , ಕೈಗೆ ತರಚಿದ ಗಾಯವಾಗಿತ್ತು. ನಂತರ ನನ್ನ ಅಣ್ಣನಿಗೆ ಯಾದಗಿರಿ ಆಸ್ಪತ್ರೆಗೆ ಕರೆದುಕೊಂಡು ಹೋೀಗಿ ಹೆಚ್ಚಿ ನ ಚಿಕಿತ್ಸೆಗಾಗಿ ರಾಯಚೂರ ರಿಮ್ಸ ಆಸ್ಪತ್ರೆಗ ತೆಗದುಕೊಂಡು ಹೋದೆವು. ಚಸಾಃ1 ರವರಿಗೆ ಈ ಎಲ್ಲ ವಿಷಯವನ್ನು ತಿಳಿಸಿರುತ್ತೇನೆ. ಅವರು ಸಹ ಅಸ್ಪತ್ರೆಗೆ ಬಂದಿರುತ್ತಾರೆ. ರಾಯಚುರ ಆಸ್ಪತ್ರಯಲ್ಲಿ ಚಿಕಿತ್ಸೆ ಫಲಕಾರಿಯಾದಗೆ ತೀರಿಕೊಂಡನು. ಮಃ 1-00 ಗಂಟೆಗೆ ರಾಯಚೂರಿನ ಆಸಪತ್ರೆಯಲ್ಲಿ post mortum ಮಾಡಿರುತ್ತಾರೆ. ಪೋಲಿಸರು ಸ್ಥಳದಲ್ಲಿ ಪಂಚನಮೆ ಮಾಡಿ ಮತ್ತು ಪೊಟೋಗಳನ್ನು ತೆಗೆದುಕೊಂಡಿರುತ್ತಾರೆ. ಸಾಕ್ಷಿಯು ಪೊಟೋಗಳನ್ನು ನೊಡೀ ಗುರುತಿಸಿದ್ದು ಅವು ನಿಪಿ-3 ಎಂದು, ಪಂಚನಾಮೆಯನ್ನು ನಿಪಿ-4 ಎಂದು ಸಕ್ಷಿಯ ಸಹಿಯನ್ನು ನಿಪಿ-4(ಎ) ಎಂದು ಗುರುತಿಸಲಾಯಿತು. ದಿಃ 07-04-2021 ರಂದು ಸಾಃ 5ಃ30 ರಿಂದ 6ಃ30 ಗಂಟೆಯವರಗೆ ಸಂಚಾರಿ ಪೂಲಿಸ ಠಾಣೆ ಆವರಣದಲ್ಲಿ

ಅಪಘಾತ ಪಡಿಸಿದ ಲಾರಿ ನಂ. ಎಂಹೆಚ್-12-ಕೆಪಿ-7528 ನ್ನು ಸ್ವಾಧೀನ ಪಡಿಸಿಕೊಂಡ ಸಮಯದಲ್ಲಿ ತೆಗೆದ ಭಾವ ಚಿತ್ರಗಳನ್ನು ನೋಡಿ ಗುರುತಿಸಿದ್ದು . ಫೊಟೋಗಳನ್ನು ನಿಪಿ-6 ಎಂದು , ಪಂಚನಾಮೆ ನಿಪಿ-5 ಎಂದು , ಸಾಹಿಯನ್ನು ನಿಪಿ-5(ಎ) ಎಂದು ಗುರುತಿಸಲಾಯಿತು. ಲಾರಿ ಚಾಲಕನ ತಪ್ಪಿನಿಂದ ಅಪಘಾತವಾಗಿ ರುತ್ತದೆ .

<u>ಪಾಟೀ ಸವಾಲುಃ ಪರಃ ಶ್ರೀ ಎಸ್ ಎಸ್ ಪಿ ವಕೀಲರಿಂದಃ</u>

ನಾವು ಮೂರು ಜನ ಅಣ್ಣ ತಮ್ಮಂದಿರು. ನನ್ನ ಅಣ್ಣ ಸಾಬರೆಡ್ಡಿ ಸೆಂಟ್ರಿಂಗ ಕೆಲಸ ಮಾಡುತ್ತಿದ್ದ. ಆತನಿಗೆ ಸ್ವಲ್ಪ ಕುಡಿಯುವ ಚಟ ಇತ್ತು. ಸನಾ ಮೊಬೈಲ ಅಂಗಡಿಯವರು ಮೊಬೈಲ ರಿಚಾರ್ಜ ಮಾಡುವುದಿಲ್ಲ ಕೇವಲ ಮೊಬೈಲನ್ನು ಮಾರಾಟ ಮಾಡುತ್ತರೆ ಎಂದರೆ ಸರಿಯಲ್ಲ. ಗಾಂಧಿ ನಗರ ಹತ್ತಿರ ಹಾಗೂ ಶಾಸ್ತ್ರಿ ಸರ್ಕಲ ಸುತ್ತಮುತ್ತಲೂ ಸುಮರು ಅಂಗಡಿಕಾರರು ಮೊಬೈಲನ್ನು ರಿಚಾರ್ಜ ಮಾಾಡುತ್ತಾರೆ ಎಂದರೆ ಸರಿ ಯಲ್ಲ. ನಮ್ಮ ಅಣ್ಣನ ಆರೋಗ್ಯ ಚೆನ್ನಗಿತ್ತು. ಆದಕರಣ ನಾನು ಆ ದಿನ ಆತನ ಜೊತೆಗೆ ಹೋಗುವ ಪ್ರಸಂಗ ಬರುವುದಿಲ್ಲ ಎಂದರೆ ಸರಿಯಲ್ಲ. ಸದರಿ ದಿವಸ ನಾನು ನನ್ನ ಅಣ್ಣನ ಜೊತೆಗೆ ಹೋಗಿರುವುದಿಲ್ಲ ಎಂದರೆ ಸರಿಯಲ್ಲ. ಸುಭಾಸ ಸರ್ಕಲ ಒಂದು ಶಹಾಪುರಗೆ ಹೋಗುವ ರಸ್ತೆ , ಒಂದು ರಸ್ತೆಯು ಹೈದ್ರಾಬಾದಗೆ, ಇನ್ನೊಂದು ರಸ್ತೆಯೂ ಚಿತ್ತಪೂರ ವಾಡಿ ರಸ್ತೆಗೆ ಹೋಗುತ್ತದೆ ಎಂದರೆ ಸರಿ. ಸುತ್ತಮುತ್ತಲು ಸುಮಾರು ಅಂಗಡಿಗಳು ಇವೆ ಎಂದರೆ ಸರಿ. ಸುಭಾಸ ಸರ್ಕಲ ಹತ್ತಿರ ಒನ್ ವೇ ಇದೆ ಎಂದರೆ ಸರಿ . ರಸ್ತೆಯ ಎರಡು ಬದಿಯಲ್ಲಿ ದ್ವಿಚಕ್ರ ಮತ್ತು ನಾಲ್ಕು ಚಕ್ರ ವಾಹನಗಳು ಪಾರ್ಕ ಮಾಡಿ ಕೆಲಸಕ್ಕೆ ಹೋಗುತ್ತಾರೆ ಎಂದರೆ ಸರಿ. ಕೇವಲ ಒಂದೇ ಲಾರಿ ಹೊಗುವಷ್ಟು ಮಾತ್ರ ಅಲ್ಲಿ ಜಾಗ ಇರುತ್ತದೆ ಎಂದರೆ ಸರಿ. ಆದ ಕಾರಣ ಎಲ್ಲ ವಾಹನಗಳು ಸಾವಕಾಶವಾಗಿ ಬರುತ್ತವೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಕೆಲವು ವಾಹನಗಳು ಸಾವಕಾಶವಾಗಿ ಮತ್ತು ಕೆಲವು ವಾಹನಗಳು ಜೋರಾಗಿ ಬರುತ್ತವೆ ಎಂದು ಹೇಳುತ್ತಾರೆ. ಸುಭಾಷ ಸರ್ಕಲ ಹತ್ತಿರ ಒಂದು ಹೂವಿನ ಅಂಗಡಿ ಇದೆ ಎಂದರೆ ಸರಿ. ಆದಕಾರಣ ಜೋರಾಗಿ ಬಂದು ಅದೇ ವೇಗದಲ್ಲಿ ವಾಹನಗಳನ್ನು ತಿರುಗಿಸಲಾಗುವುದಿಲ್ಲ ಎಂದರೆ ಸರಿಯಲ್ಲ. ದ್ವಿಚಕ್ರ ವಾಹನ ಮತ್ತು ನಾಲ್ಕು ಚಕ್ರದ ವಾಹನದವರು ಪಾರ್ಕ ಮಾಡಿ ಸಾಕಷ್ಟು ಜಾಗ ಇರದೆ ಇದ್ದಿದ್ದರಿಂದ ಲಾರಿಯನ್ನು ವೇಗದಲ್ಲಿ ತಿರುವು ಪಡೆದುಕೊಳ್ಳಲು ಆಗುವುದಿಲ್ಲ ಎಂದರೆ ಸರಿಯಲ್ಲ. ನನ್ನ ಅಣ್ಣ ಸ್ವಲ್ಪ ಮುಂದೆ ಇದ್ದ ನಾನು ಹಿಂದೆ ಇದ್ದೆ. ಸಾಕ್ಷಿಯು ಮುಂದುವರೆದು ಸುಮಾರು 6-7 ಫೀಟ ಅಂತರ ಇತ್ತು ಎಂದು ಹೇಳುತ್ತಾರೆ. ಪೋಲಿಸರು ನನ್ನ ಯಾವುದೇ ಹೇಳಿಕೆ ಪಡೆದುಕೊಂಡಿರುವುದಿಲ್ಲ. ಸಾಕ್ಷಿಯು ಮುಂದುವರೆದು ಪೋಲಿಸರು ಅಪಘಾತ ಹೇಗೆ ಆಗಿದೆ ಎಂದು ಕೇಳಿದರು ನಾನು ಅವರಿಗೆ ತಿಳಿಸಿರುತ್ತೆನೆ. ಮೂರು ದಿವಸಗಳ ನಂತರ ಪೋಲಿಸರು ನನ್ನ ಹೇಳಿಕೆ ಪಡೆದುಕೊಂಡಿರುತ್ತಾರೆ. ಅಪಘಾತವಾದ ಮಾರನೆ ದಿವಸ ಶವ ಸಂಸ್ಕಾರ ಮಾಡಿರುತ್ತಾರೆ. ಶವಸಂಸ್ಕಾರ ಆಗುವವರಗೆ ನಾನು 5 ರಿಂದ 6 ಗಂಟೆಯವರಗೆ ನಾನು ಅಲ್ಲಿಯೆ ಇದ್ದೆ. ಮಃ3ಃ3.0 ಗಂಟೆಯರೆಗೆ ರಾಯಚೂರುನಿಂದ ಶವವನ್ನು ಊರಿಗೆ ತಂದಿರುತ್ತೇವೆ. ಶವಸಂಸ್ಕಾರ ಅಗುವವರಗೆ ನಾನು ಎಲ್ಲಿಯೂ

ಹೋಗಿರುವುದಿಲ್ಲ. ಶವ ಸಂಸ್ಕಾರ ಆದ ನಂತರ ನಾವು ಆ ದಿವಸ ಮನೆ ಬಿಟ್ಟು ಎಲ್ಲಿಯೂ ಹೋಗಿರುವುದಿಲ್ಲ. ಯಾದಗಿರಿಯಲ್ಲಿ ಯಾವುದೇ ಪಂಚನಾಮಕ್ಕೆ ಪೋಲಿಸರು ನನ್ನ ಸಹಿ ಪಡೆದುಕೊಂಡಿರುವುದಿಲ್ಲ. ಅಪಘಾತವು ಸುಮಾರು 8- ಗಂಟೆಗೆ ಆಗಿರುತ್ತದೆ. ರಾಃ8-30 ಗಂಟೆಗೆ ನಾನು ನನ್ನ ಅಣ್ಣನ ಹೆಂಡತಿಗೆ ಅಪಘಾತದ ವಿಷಯ ತಿಳಿಸಿರುತ್ತೆನೆ. ಅಪಘಾತದ ತಕ್ಷಣ ಸುತ್ತುಮುತ್ತ ಅಂಗಡಿಕಾರರು ಹಾಗೂ 20-30 ಜನರು ಜಮಾಯಿಸಿದ್ದರು. ಆರೋಪಿಯು ತನ್ನ ವಾಹನವನ್ನು ಅತೀ ವೇಗ , ಅಜಾಗರೂಕತೆಯಿಂದ ನಡೆಸಿಕೊಂಡು ಅಪಘಾತಪಡಿಸಿದ ಎಂದು ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅಪಘಾತದಲ್ಲಿ ನನ್ನ ಅಣ್ಣನಿಗೆ ಗಾಯಗಳು ಆದವು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಂತರ ನನ್ನ ಅಣ್ಣನ ಹೆಂಡತಿಗೆ ಅಪಘಾತವಾದ ವಿಷಯ ತಿಳಿಸಿರುತ್ತೇನೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಂತರ ನಮ್ಮ ಅಣ್ಣ ರಾಯಚೂರಿಗೆ ಕರೆದುಕೊಂಡು ಹೇದೇವು ಅಲ್ಲಿ ಚಿಕಿತ್ಸೆ ಫಲಕಾರಿಯಾಗದೆ ತೀರಿಕೊಂಡ ಎಂದರೆ ಸರಿಯಲ್ಲ. ಪೋಲಿಸರು ನನ್ನ ಸಮಕ್ಷಮ ಸ್ಥಳ ಪಂಚನಾಮೆ ಹಾಗೂ ವಾಹನದ ಜಪ್ತಿ ಪಂಚನಾಮ ಮಾಡಿದರು ಎಂದು ಸುಳ್ಳು ಸಾಕ್ಷಿ ಹೇಳುತ್ತೇನೆ ಎಂದರೆ ಸರಿಯಲ್ಲ. ಪಂಚನಾಮೆ ಮಾಡುವ ಸಮಯದಲ್ಲಿ ಪೋಲಿಸರು ನನ್ನ ಸಹಿ ಪಡೆದುಕೊಂಡಿರುತ್ತಾರೆ. ಚಾಲಕನ ಯಾವುದೇ ತಪ್ಪು ಇರದದಿದ್ದರೂ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಮ್ಮ ಅಣ್ಣ ಆ ದಿವಸ ಕುಡಿದಿದ್ದ ಮತ್ತು ಜೊತೆಗೆ ನನಗೆ ಕರೆದುಕೊಂಡು ಹೋದ ಹಾಗು ನನ್ನ ಅಣ್ಣ ಜೋಲಿ ತಾಳಲಾರದೆ ಬಿದ್ದು ತೀರಿಕೊಂಡ ಎಂದರೆ ಸರಿಯಲ್ಲ. ಅಪಘಾತಕ್ಕೆ ಹಾಗೂ ವಾಹನಕ್ಕೆ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ಎಂದು ಸುಳ್ಳು ಸಾಕ್ಷಿ ಹೇಳುತ್ತಿದೇನೆ ಎಂದರೆ ಸರಿಯಲ್ಲ. ನಾನು ಸದರಿ ದಿವಸದಂದು ನನ್ನ ಅಣ್ಣ ಜೊತೆ ಇದ್ದು ಅಪಘಾತ ನೋಡಿದ್ದೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದೇನೆ ಎಂದರೆ ಸರಿಯಲ್ಲ. ವಾಹನವು ಯಾವುದೇ ಅಪಘಾತ ಪಡಿಸಿದ್ದು ಪರಿಹಾರಕ್ಕಾಗಿ ಸದರಿ ವಾಹನವನ್ನು ನಾನು ಸೇರಿಸಿದ್ದೇವೆ ಎಂದರೆ ಸರಿಯಲ್ಲ. ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ ಇಲ್ಲ</u>

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚುಗಾರನಿಂದ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ ಅದೆ.

ಮುಖ್ಯ ನ್ಯಾಯಿಕ ದಂಡಾಧಿಕಾರಿಗಳು,
ಯಾದಗಿರಿ.

ಮುಖ್ಯ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಯಾದಗಿರಿ .

ಸಿ.ಸಿ. ನಂ. **264/ 2021**

ಸಿಡಬ್ಲ್ಯೂ.**3**
ಪಿಡಬ್ಲ್ಯೂ.**3**

ದಿನಾಂಕಃ **31-08-2023**

ಸಾಕ್ಷಿಗೆ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು

ಸಾಕ್ಷಿಯ ಹೆಸರು - ಅರ್ಜುನ

ತಂದೆಯ/ಗಂಡನ ಹೆಸರು - ಬೀಮ

ವಯಸ್ಸು - **27** ವರ್ಷ

ಉದ್ಯೋಗ - ಸೆಂಟ್ರಿಂಗ ಕೆಲಸ

ವಾಸಸ್ಥಳಃ - ಯಾದಗಿರಿ

ಮುಖ್ಯ ವಿಚಾರಣೆಃ ಹಿ.ಸ.ಸ.ಅಭಿಯೋಜಕರಿಂದಃ

ಮೃತ ಸಾಬರೆಡ್ಡಿ ನನಗೆ ಪರಿಚಯ. ಚಾಸಾಃ2 ರವರ ಪರಿಚಯ ಇದೆ . ಸಾಬರೆಡ್ಡಿ 2 ವರ್ಷ ಹಿಂದೆ ಮೃತ ಪಟ್ಟಿರುತ್ತಾರೆ. ನಾನು ಮತ್ತು ಚಾಸಾಃ4 ರವರೊಂದಿಗೆ ರಾಯಚೂರಿನ ರಿಮ್ಸ ಆಸ್ಪತ್ರಗೆ ಬೆಳಗ್ಗ 11 ಗಂಟೆಗೆ ಸಾಬರೆಡ್ಡಿ ಮೃತಪಟ್ಟಿದ್ದರಿಂದ ನಾವೆ ಸ್ವತಃ ಹೋಗಿರುತ್ತೇವೆ . ವೈದ್ಯರು postmortum ಮಾಡಿರುತ್ತಾರೆ. ಹಾಗೂ ಪೋಲಿಸರು ಬರವಣಿಗೆ ಸಹ ಮಾಡಿರುತ್ತಾರೆ. ಸಾಕ್ಷಿಯು ಶವ ಪಂಚನಾಮೆಗೆ ನಾನು ಸಹಿ ಮಾಡಿರುತ್ತೇನೆ. ಆ ಸಮಯದಲ್ಲಿ ರಾತ್ರಿ 8 ಗಂಟೆಯಾಗಿತ್ತು. ಸಾಬರೆಡ್ಡಿ ಲಾರಿ ಗುದ್ದಿದರಿಂದ ಮೃತಪಟ್ಟಿರುತ್ತಾನೆ. ಸಾಕ್ಷಿಯು ಸದರಿ ಪೊಟೋವನ್ನು ನಿಪಿ-2 ಎಂದು , ಶವದ ಪಂಚನಾಮೆಯನ್ನು ನಿಪಿ-7 ಎಂದು , ಸಹಿಯನ್ನು ನಿಪಿ-7(ಎ) ಎಂದು ನೋಡಿ ಗುರುತಿಸಿರರುತ್ತಾರೆ.

ಪಾಟೀ ಸವಾಲುಃ ಪರಃ ಶ್ರೀ ಎಸ್ ಎಸ್ ಪಿ ವಕೀಲರಿಂದಃ

ಬೆಃ9 ಗಂಟೆಗೆ ಅಪಘಾತವಾಗಿದೆ ಎಂದು ವಿಷಯ ತಿಳಿಯಿತು. ಮೃತ ಸಾಬರೆಡ್ಡಿ ನಮ್ಮ ಮನೆಯ ಪಕ್ಕದವನು. ಸುಮಾರು 4 ಜನ ನಾವು ರಾಯಚೂರಿನ ರಿಮ್ಸ ಆಸ್ಪತ್ರೆಗೆ ಹೋಗಿರುತ್ತೇವೆ. ಪಂಚನಾಮೆಯನ್ನು ಪೋಲಿಸರು ನಮಗೆ ಓದಿ ಹೇಳಿರುವುದಿಲ್ಲ. ಚಾಸಾಃ6 ನಮಗೆ ಪಂಚರಾಗಲು ಕೇಳಿಕೊಂಡನು. ನನಗೆ ಸಹಿ ಮಾಡು ಎಂದರು ನಾನು ಸಹಿ ಮಾಡಿರುತ್ತೇನೆ. ಪಂಚನಾಮೆಯಲ್ಲಿ ಏನು ಬರೆದಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ನನಗೆ ಯಾವುದೇ ವಿಷಯ ಗೊತ್ತಿಲ್ಲ. ಮೃತ ಸಾಬರೆಡ್ಡಿ ಕುಟುಂಬದವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ

ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪೋಲಿಸರು ಯಾವುದೇ ಪಂಚನಾಮೆ ಮಾಡಿರುವುದಿಲ್ಲ ಮತ್ತು ನಾನು ಆಸ್ಪತ್ರೆಯಲ್ಲಿ ಸಹಿ ಮಾಡಿರುವುದಿಲ್ಲ ಪೋಟೋ ಯಾವ ವಿಷಯಕ್ಕೆ ತೆಗೆದಿರುತ್ತಾರೆ ಎಂದರೆ ಸರಿಯಲ್ಲ.

( ಈ ಹಂತದಲ್ಲಿ ಹಿರಿಯ ಸ.ಸ. ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟಿ ಸವಾಲು ಮಾಡಲು ಕೇಳಿದ್ದು ಅವಕಾಶ ನೀಡಲಾಗಿದೆ.)

<u>ಪಾಟೀ ಸವಾಲುঃ ಪರঃ ಶ್ರೀ ಹಿರಿಯ ಸ.ಸ. ವಕೀಲರಿಂದঃ</u>

ಪೋಲಿಸರು ನನಗೆ ಪಂಚರಾಗಲು ವಿನಂತಿಸಿದರು ಮತ್ತು ಅದರಂತೆ ನಾನು ಹಾಗೂ ಚಾಸಾঃ 4 ರವರು ಪಂಚರಾದೆವು. ಪೋಲಿಸರು ನನಗೆ ಗಾಯ ತೋರಿಸಿದರು. ಪೋಲಿಸರು ನನಗೆ ಪಂಚನಾಮೆಯನ್ನು ಓದಿ ಹೇಳಿದರು ಎಂದರೆ ಸರಿ. ಓದಿದ ನಂತರ ಸರಿ ಇದೆ ಎಂದು ಮನಗಂಡು ನಾನು ಸಹಿ ಮಾಡಿರುತ್ತೇನೆ.

<u>ಪಾಟೀ ಸವಾಲುঃ ಪರঃ ಶ್ರೀ ಎಸ್ ಎಸ್ ಪಿ ವಕೀಲರಿಂದঃ</u>

ನನಗೆ ಕಾನೂನಿನ ಭಾಷೆ ಅರ್ಥವಾಗುತ್ತದೆ ಎಂದರೆ ಸರಿ. ನನಗೆ ಓದಲು ಬರುವುದಿಲ್ಲ. ನಾನು ಶವಾಗಾರವದಲ್ಲಿ ಸುಮಾರು 10 ರಿಂದ 15 ನಿಮಿಷ ಇದ್ದೆ. ಸಾಕ್ಷಿಯು ಸ್ವಇಚ್ಛೆಯಿಂದ ನಮಗೆ ಗಾಯಗಳು ತೋರಿಸಿದ್ದು ಎಂದು ಹೇಳುತ್ತಾರೆ. ನನಗೆ ಗಾಯಗಳು ತೋರಿಸಿದ್ದು ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆঃ ಇಲ್ಲ</u>

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚುಗಾರನಿಂದ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ ಅದೆ.

ಮುಖ್ಯ ನ್ಯಾಯಿಕ ದಂಡಾಧಿಕಾರಿಗಳು,
ಯಾದಗಿರಿ.

ಮುಖ್ಯ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಯಾದಗಿರಿ .

ಸಿ.ಸಿ. ನಂ. **547/ 2021**

ಸಿಡಬ್ಲ್ಯೂ.**8**
ಪಿಡಬ್ಲ್ಯೂ.**2**

ದಿನಾಂಕಃ

ಸಾಕ್ಷಿಗೆ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು

ಸಾಕ್ಷಿಯ ಹೆಸರು - ಪಾರ್ವತಿ

ತಂದೆಯ/ಗಂಡನ ಹೆಸರು - ಮಲ್ಲಪ್ಪ

ವಯಸ್ಸು - **40** ವರ್ಷ

ಉದ್ಯೋಗ - ಕೂಲಿ ಕೆಲಸ

ವಾಸಸ್ಥಳಃ - ಬಬಲಾದ

ಮುಖ್ಯ ವಿಚಾರಣೆಃ ಹಿ.ಸ.ಸ.ಅಭಿಯೋಜಕರಿಂದಃ

ಚಾಸಾಃ1 ನನಗೆ ಅಕ್ಕನ ಮಗಳು . ಅವಳು 2 ವರ್ಷದ ಹಿಂದೆ ಮೃತಪಟ್ಟಿರುತ್ತಾಳೆ. ಚಾಸಾಃ6 ನನಗೆ ಅಕ್ಕನ ಗಂಡನಾಗಬೇಕು. ಚಾಸಃ5 , 7 ರವರು ನನ್ನ ಸಂಬಂಧಿಕರು. ಚಾಸಃ9 ರಿಂದ 11 ರವರು ನಮ್ಮ ಊರಿನವರು ಅವರ ಪರಿಚಯ ಇದೆ. ಆರೋಪಿಯ ಪರಿಚಯ ಇದೆ. ಆರೋಪಿಯು ಚಾಸಾಃ1 ರವರಿಗೆ ಯಾವುದೇ ಲೈಂಗಿಕ ಕಿರುಕುಳ ಕೊಟ್ಟಿರುವುದಿಲ್ಲ. ಚಾಸಾಃ1 ರವರು ಬರ್ಹಿದಿಶೆಗೆ ಹೋದಾಗ ಆಕೆಗೆ ಹಿಂಬಾಲಿಸಿಕೊಂಡು ಬಂದು ಲೈಂಗಿಕ ಕಿರುಕುಳ ಕೊಡುತ್ತಿದ್ದ ಹಾಗೂ ನಾನು ಚಾಸಾಃ1 ರವರಿಗೆ ಆರೋಪಿಯಿಂದ ಬಿಡಿಸಿದೆ ಎಂದರೆ ಸರಿಯಲ್ಲ. ಪೋಲೀಸರು ನನ್ನ ಹೇಳಿಕೆ ಪಡೆದುಕೊಂಡಿರುವುದಿಲ್ಲ .

( ಈ ಹಂತದಲ್ಲಿ ಹಿರಿಯ ಸ.ಸ. ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟಿ ಸವಾಲು ಮಾಡಲು ಕೇಳಿದ್ದು ಅವಕಾಶ ನೀಡಲಾಗಿದೆ.)

ಪಾಟೀ ಸವಾಲುಃ ಪರಃ ಶ್ರೀ ಹಿರಿಯ ಸ.ಸ. ವಕೀಲರಿಂದಃ

ದಿನಾಂಕಃ 09-04-2021 ರಂದು ಸಂಜೆ ಚಾಸಾಃ1 ಬರ್ಹಿದಿಶೆಗೆ ಹೊದಾಗ ಆರೋಪಿಯು ಚಾಸಾಃ1 ರವರಕೈ ಹಿಡಿದು ಎಳೆದು –------------------------------------------ ಅಸಭ್ಯವಾಗಿ ವರ್ತಿಸಿ ನ್ನ ಜೊತೆ ಲೈಂಗಿಕ ಸಂಪರ್ಕ ಮಾಡಲು ಒತ್ತಾಯ ಮಾಡಿದ ಎಂದು –-------------- ಚಾಸಾಃ1 ಮತ್ತು ನಾನು ಚಾಸಾಃ1 ರವರಿಗೆ ಆರೋಪಿಯಿಂದ ಬಿಡಿಸಿದೆ ಎಂದರೆ ಸರಿಯಲ್ಲ. ನಿಪಿ-2 ರಂತೆ ಹೇಳಿಕೆ ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ಚಾಸಾಃ1 ರವರು ಮೃತ ಪಟ್ಟಿರುವುದರಿಂದ ಆರೋಪಿ ಜೊತಗೆ ರಾಜಿ ಮಾಡಿ ಕೊಂಡು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚುಗಾರನಿಂದ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ ಅದೆ.

ಮುಖ್ಯ ನ್ಯಾಯಿಕ ದಂಡಾಧಿಕಾರಿಗಳು,
ಯಾದಗಿರಿ.

ಮುಖ್ಯ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಯಾದಗಿರಿ .

ಸಿ.ಸಿ. ನಂ. **547/ 2021**

ಸಿಡಬ್ಲ್ಯೂ.**6**
ಪಿಡಬ್ಲ್ಯೂ.**3**

ದಿನಾಂಕಃ

ಸಾಕ್ಷಿಗೆ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು

ಸಾಕ್ಷಿಯ ಹೆಸರು - ದೇವಪ್ಪ

ತಂದೆಯ/ಗಂಡನ ಹೆಸರು - ದ್ಯವಪ್ಪ

ವಯಸ್ಸು - **50** ವರ್ಷ

ಉದ್ಯೋಗ - ಕೂಲಿ ಕೆಲಸ

ವಾಸಸ್ಥಳಃ - ಬಬಲಾದ

ಮುಖ್ಯ ವಿಚಾರಣೆಃ ಹಿ.ಸ.ಸ.ಅಭಿಯೋಜಕರಿಂದಃ

ಚಾಸಾಃ1 ನನಗೆ ಮಗಳಾಬೇಕು. ಅವಳು 2 ವರ್ಷದ ಹಿಂದೆ ಮೃತಪಟ್ಟಿರುತ್ತಾಳೆ. ಚಾಸಾಃ4 ನನಗೆ ಹೆಂಡತಿಯಾಗಬೇಕು. ಚಾಸಃ5 , 7 ,8 ರವರು ನನ್ನ ಸಬಂಧಿಕರು. ಚಾಸಃ9 ರಿಂದ 11 ರವರು ನಮ್ಮ ಊರಿನವರು ಅವರ ಪಚರಿಯ ಇದೆ. ಆರೋಪಿಯ ಪರಿಚಯ ಇದೆ. ಆರೋಪಿಯು ಚಾಸಾಃ1 ರವರಿಗೆ ಯಾವುದೇ ಲೈಂಗಿಕ ಕಿರುಕುಳ ಕೊಟ್ಟಿರುವುದಿಲ್ಲ. ಪೋಲೀಸರು ನನ್ನ ಹೇಳಿಕೆ ಪಡೆದುಕೊಂಡಿರುವುದಿಲ್ಲ . ಆರೋಪಿಯ ವಿರುದ್ಧ ನನ್ನ ಮಗಳಿಗೆ ಲೈಂಗಿಕ ಕಿರುಕುಳ ಕೊಡುತ್ತಿದ್ದಾರೆ ಎಂದು ನಾನು ಹೇಳಿರುವುದಿಲ್ಲ.

( ಈ ಹಂತದಲ್ಲಿ ಹಿರಿಯ ಸ.ಸ. ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟಿ ಸವಾಲು ಮಾಡಲು ಕೇಳಿದ್ದು ಅವಕಾಶ ನೀಡಲಾಗಿದೆ.)

ಪಾಟೀ ಸವಾಲುಃ ಪರಃ ಶ್ರೀ ಹಿರಿಯ ಸ.ಸ. ವಕೀಲರಿಂದಃ

ದಿನಾಂಕಃ 09-04-2021 ರಂದು ಸಂಜೆ ನಾನು ಮತ್ತು ಚಾಸಾಃ4 ರವರು ಮನೆಯಲ್ಲಿದ್ದಾಗ ನನ್ನ ಮಗಳು ಮತ್ತು ನನ್ನ ಹೆಂಡತಿಯ ತಂಗಿ ಚಾಸಾಃ8 ರವರು ನನ್ನ ಮಗಳು ಬರ್ಹಿದಿಶೆಗೆ ಹೊದಾಗ ಆರೋಪಿಯು ನನ್ನ ಮಗಳ ಕೈ ಹಿಡಿದು ಎಳೆದು ---------------------------------------------- ಅಸಭ್ಯವಾಗಿ ವರ್ತಿಸಿ ಚಾಸಾಃ1 ರವರ ಜೊತೆ ಲೈಂಗಿಕ ಸಂಪರ್ಕ ಮಾಡಲು ಒತ್ತಾಯ ಮಾಡಿದ ಎಂದು ---------------- ಚಾಸಾಃ1 ಮತ್ತು 8 ರವರು ನನಗೆ ಹೇಳಿದರು ಎಂದರೆ ಸರಿಯಲ್ಲ. ನಿಪಿ-3 ರಂತೆ ಹೇಳಿಕೆ ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ಚಾಸಾಃ1 ರವರು ಮೃತ ಪಟ್ಟಿರುವುದರಿಂದ ಆರೋಪಿ ಜೊತಗೆ ರಾಜಿ ಮಾಡಿಕೊಂಡು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮಗಳು ನ್ಯಾಯಾಲಯದಲ್ಲಿ ನ್ಯಾಯಾಧೀಶರು ಮುಂದೆ ಕಲಂ. 164 ರ ಅಡಿಯಲ್ಲಿ ಸಾಕ್ಷಿ ನುಡಿದಿರುತ್ತಾಳೆ.

ಮರು ವಿಚಾರಣೆಃ ಇಲ್ಲ

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚುಗಾರನಿಂದ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ ಅದೆ.

ಮುಖ್ಯ ನ್ಯಾಯಿಕ ದಂಡಾಧಿಕಾರಿಗಳು,
ಯಾದಗಿರಿ.